ಕಥೆ

# ಸಾಂಗತ್ಯಕ್ಕೊಂದು ಹೆಸರು ಬೇಕೇ?



**ಆನಂದ್ ಋಗ್ವೇದಿ**

ಕಲೆ: ಮುರಳೀಧರ್ ರಾಥೋಡ್

'ಹೇಯ್ ನ್ಯಾಡಿ. ಈ ವೀಕೆಂಡ್ ಫ್ರೀ ಇದ್ದೀಯಾ? ನಾವಿಬ್ರೂ ಡೇಟಿಂಗ್ ಹೋಗೋಣ್ವಾ' ಎಂದು ತನ್ನ ಟಿಪಿಕಲ್ ತೈವಾನಿ ಉಚ್ಚಾರದಲ್ಲಿ ಕ್ಯಾಟಿ ಯಾನೆ ಕ್ಯಾಥರೀನ್ ಕೇಳಿದಾಗ ನ್ಯಾಡಿ ಯಾನೆ ಶ್ರೀನಿಧಿ ಅಪ್ರತಿಭನಾಗಿದ್ದ! ಕೆಮಿಸ್ಟ್ರಿ ಲ್ಯಾಬಿನಲ್ಲಿ ಟೈಟ್ರೇಷನ್ ಮಾಡುತ್ತಿದ್ದವ ಈ ಗಲಿಬಿಲಿಯಿಂದಾಗಿ ಬ್ಯೂರೆಟ್ಟಿನ ತಿರುಪನ್ನು ತುಸು ಜೋರಾಗಿ ತಿರುಗಿಸಿದ್ದ. ಹನಿ ಹನಿ ಬೀಳುತ್ತಿದ್ದ ಕೆಮಿಕಲನ್ನು ಸರ್ರನೇ ಬೀಕರಿಗೆ ಹೊಯ್ದಂತಾಗಿ ಅದರಲ್ಲಿದ್ದ ದ್ರಾವಣ ತಕ್ಷಣ ಗುಲಾಬಿ ಬಣ್ಣಕ್ಕೆ ತಿರುಗಿತ್ತು. ಆ ಬಣ್ಣವೇ ನಿಧಿಯ ಮುಖದಲ್ಲಿ ಪ್ರತಿಫಲಿಸಿ ನಾಚಿಕೆಯಿಂದ ಕೆಂಪಾಗಿದ್ದ ಅವನ ಗಲ್ಲದ ಬಣ್ಣಕ್ಕೆ ಬೇರೆಯದೇ ಕಾರಣ ಕೊಟ್ಟು ಮುಚ್ಚಿತ್ತು.

'ಶೆಡ್ಯೂಲ್ ನೋಡಿ ಹೇಳ್ತೀನಿ'ಎಂದು ಕ್ಯಾಟಿಯನ್ನು ಸಾಗ ಹಾಕಿ ನಿಧಿ ಸಂಜೆ ರೂಮಿಗೆ ಬಂದಾಗಲೂ ಕಿವಿಯಲ್ಲಿ ಅದೇ ಮಾತು, ಮನದಲ್ಲಿ ಅಯೋಮಯ ಸ್ಥಿತಿ.

'ಡೇಟಿಂಗ್ ಅಂದ್ರೆ ಹನಿಮೂನ್ ತರಹಾನಾ!?' ನಿಧಿಯ ಪ್ರಶ್ನೆಗೆ ನಕ್ಕಿದ್ದ ರೂಂಮೇಟ್ ವಿಲಿಯಂ.

'ಇದೇನೋ, ಡೇಟಿಂಗ್ ಬಗ್ಗೆ ಕೇಳ್ತಿದ್ದೀಯ!?' ಎಂದು ನಸು ನಕ್ಕ ವಿಲಿಯಂಗೆ 'ಹೀಗೇ ಸುಮ್ನೇ ಕೇಳಿದೆ' ಎಂದೇನೋ ಸಬೂಬು ನೀಡಿದರೂ ಆ ಮಾತಿನಲ್ಲಿ ವಿಲಿಯಂಗೆ ಅಷ್ಟೇ ಅಲ್ಲ, ಸ್ವತಃ ನಿಧಿಗೂ ನಂಬಿಕೆ ಇರಲಿಲ್ಲ!

ಭಾರತ ಎಂಬೋ ದೇಶದ ಕರ್ನಾಟಕ ಎಂಬ ರಾಜ್ಯದ ಚಿತ್ರದುರ್ಗ ಜಿಲ್ಲೆಯ ಪುಟ್ಟ ಹಳ್ಳಿಯಿಂದ ಬಂದ ಶ್ರೀನಿಧಿ ಮತ್ತು ಇದೇ ಇಂಗ್ಲೆಂಡ್‌ನಲ್ಲಿ ಹುಟ್ಟಿ ಬೆಳೆದ ವಿಲಿಯಂ ಓದಲೆಂದೇ ನಾಟ್ಟಿಂಗ್‌ಹ್ಯಾಮ್‌ಗೆ ಬಂದು ಸೇರಿದ್ದವರು. ಗಣಿತ ಕಷ್ಟವೆಂದರೂ ಬಿಡದೇ ತಮ್ಮ ಒಬ್ಬನೇ ಮಗನಿಗೆ ಇಂಜಿನಿಯರಿಂಗ್ ಓದಿಸಬೇಕು ಎಂಬ ಅಪ್ಪನ ಹಠಕ್ಕೆ ಮಣಿದು ಗಣಿತ ಹೆಚ್ಚಿಲ್ಲದ ಕೆಮಿಕಲ್ ಇಂಜಿನಿಯರಿಂಗ್ ಮಾಡಿದ್ದವ ಶ್ರೀನಿಧಿ. ಬಿ.ಇ. ಪದವಿ ಪಡೆದರೂ ಕೆಲಸ ಸಿಗದೇ ಮನೆಯಲ್ಲೇ ಇದ್ದ ಮಗನನ್ನು ಸ್ವತಃ ತಂದೆಯೇ ಮಾತನಾಡಿಸುತ್ತಿರಲಿಲ್ಲ! ಮನೆಯವರಿಗಿಂತ ಹೆಚ್ಚು ದೇವರ ಬಳಿಯೇ ಮಾತನಾಡುತ್ತಿದ್ದ ಅಮ್ಮನ ಬಳಿ ನಿಧಿ ತನ್ನ ಅಳಲನ್ನು ತೋಡಿಕೊಂಡರೂ, ಇಹದ ಈ ತರತಮವನ್ನು ಸರಿಪಡಿಸಲು ಅಮರ್ತ್ಯೆಯಾದ ಆಕೆಗೂ ಸಾಧ್ಯವಾಗಿರಲಿಲ್ಲ. ಆಗ ನೆರವಿಗೆ ಬಂದಿದ್ದೇ ಈ ನಾಟ್ಟಿಂಗ್‌ಹ್ಯಾಮ್ ಯೂನಿವರ್ಸಿಟಿ. ಯಾವುದೇ ವಿಜ್ಞಾನದ ಸ್ನಾತಕ ಪದವಿ ಪಡೆದವರೂ ಇಲ್ಲಿ ತಮ್ಮ ಆಸಕ್ತ ವಿಷಯದಲ್ಲಿ ಸ್ನಾತಕೋತ್ತರ ಪದವಿ ಓದಬಹುದೆಂಬ ಅವಕಾಶವನ್ನು ಗೆಳೆಯನೊಬ್ಬ ಹೇಳಿದ್ದೇ, ನಿಧಿ ನೆಟ್ಟಿನಲ್ಲಿ ಜಾಲಾಡಿ ಯೂನಿವರ್ಸಿಟಿಯ ವಿವರ ಪಡೆದು ಅರ್ಜಿ ಗುಜರಾಯಿಸಿದ್ದ. ಯೂನಿವರ್ಸಿಟಿಯ ಎಲ್ಲಾ ಬೇಕು ಬೇಡಗಳಿಗೆ ಉತ್ತರಿಸಿ ಆಯ್ಕೆಯಾದಾಗ ಸ್ಪಂದಿಸುವ ಅನಿವಾರ್ಯತೆ ನಿಧಿಯ ಅಪ್ಪ ರಂಗಪ್ಪನದು. ತನ್ನ ಸಹೋದ್ಯೋಗಿ ಸ್ನೇಹಿತರ